ದಿನಾಂಕ 25-02-2019 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲು ಃ ಶ್ರೀ ಬಿ.ಜೆ.ಆರ್.ವಕೀಲರಿಂದಃ**

ಆ ದಿನ ನಾವೇ ರಾಜಿ ಮಾಡಿಕೊಂಡ ಬಗ್ಗೆ ನಿಂಗಮ್ಮ ಮತ್ತು ಈರಮರಿಯಣ್ಣ ಹಾಗೂ ದಾಸಣ್ಣ ಹೇಳಿದ್ದರು. ನಾನು ಹೇಳಿದ ನಿಂಗಮ್ಮ ಮತ್ತು ಈ ದಾವೆಯಲ್ಲಿಯ ೧ ನೇ ವಾದಿ ನಿಂಗಮ್ಮ ಬೇರೆಬೇರೆ ಎಂದರೆ ಸರಿಯಲ್ಲ. ಆ ದಾವೆಯಲ್ಲಿನ ವಾದಿಯ ಹೆಸರು ಲಿಂಗಮ್ಮ ಆಗಿದೆ ಎಂದರೆ ಸಾಕ್ಷಿಯು ಆ ೨ ಜನ ಒಬ್ಬರೇ ಆಗಿರುತ್ತಾರೆ ಎನ್ನುತ್ತಾರೆ. ಓಎಸ್ ನಂ ೩೪೮/೯೪ ರ ದಾವೆಯು ಈ ಕೇಸಿನ ೧ನೇ ವಾದಿಯು ಹಾಕಿರಲಿಲ್ಲ ಎಂದರೆ ಸರಿಯಲ್ಲ. ನಾನು ಆ ರೀತಿ ಆಕೆ ಆ ದಾವೆಯು ಹಾಕಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನೇ ಯಾವುದೋ ಒಬ್ಬ ಲಿಂಗಮ್ಮ ಎನ್ನುವವರಿಗೆ ಕರೆದುಕೊಂಡು ಹೋಗಿ ಆ ದಾವೆ ಹಾಕಿಸಿದ್ದೇ ಎಂದರೆ ಸರಿಯಲ್ಲ.

೧೯೬೫ ರ ಹಿಂದೆ ಹಳ್ಳಿಗಳಲ್ಲಿ ಪಂಚಾಯಿತಿ ಪಾಲುಪಟ್ಟಿ ಬರೆಯುವ ರೂಢಿ ಇತ್ತು ಎಂದರೆ ಗೊತ್ತಿಲ್ಲ. ೧೯೭೬ ರಲ್ಲಿ ೧ನೇ ವಾದಿಯ ಗಂಡ ಮತ್ತು ಆತನ ಸಹೋದರರು ಎಲ್ಲಾ ದಾವಾ ಸ್ವತ್ತುಗಳನ್ನು ಸೇರಿ ಪಂಚಾಯಿತಿ ಪಾಲುಪಟ್ಟಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ದ್ಯಾವರಪ್ಪ ಬಿನ್ ಚಿಕ್ಕದಾಸಪ್ಪ ಇವರ ಹೆಸರಿಗೆ ಇದ್ದ ಸರ್ವೆ ನಂ 94/2 ಬಿ ಜಮೀನನ್ನು ಸದರಿ ಪಂಚಾಯಿತಿ ಪಾಲುಪಟ್ಟಿಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ಪಂಚಾಯಿತಿ ಪಾಲುಪಟ್ಟಿ ಅಮಾನತ್ತಿನಲ್ಲಿ ಇಟ್ಟಿದ್ದರು ಎಂದರೆ ಸರಿಯಲ್ಲ. ದಾವಾ ಐಟಂ 1 ಮತ್ತು 2 ರ ಜಮೀನು ಗಳ ಬಗ್ಗೆಯು ಸಹ ಸದರಿ ಪಾಲುಪಟ್ಟಿಯಲ್ಲಿ ಸೇರಿಸಲಾಗಿತ್ತು ಎಂದರೆ ಸರಿಯಲ್ಲ.

1ನೇ ಪ್ರತಿವಾದಿ 2 ಜನ ಹೆಣ್ಣುಮಕ್ಕಳು ಮತ್ತು 2 ಜನ ಗಂಡು ಮಕ್ಕಳು, ಅವರೆಂದರೆ ಪುಟ್ಟತಾಯಮ್ಮ, ಸಣ್ಣತಾಯಮ್ಮ, ಈರಣ್ಣ ಮತ್ತು ರಾಜಣ್ಣ. ಪುಟ್ಟತಾಯಮ್ಮನಿಗೆ 20-25 ವರ್ಷ ವಯಸ್ಸಾಗಿದೆ. ಅದು ಅವರು ನಮ್ಮ ಊರಿನವರು ಆಗಿರುವ ಕಾರಣ ಗೊತ್ತು ಎನ್ನುತ್ತಾರೆ. ಆಕೆಗೆ 50 ವರ್ಷ ವಯಸ್ಸಾಗಿದೆ ಎಂದರೆ ಸರಿಯಲ್ಲ.

ಚಿಕ್ಕದಾಸಪ್ಪನ 2ನೇ ಮಗ ಕದುರಣ್ಣ ದಾವಾ ಐಟಂ ನಂ 3 ನ್ನು ಒಟ್ಟು ಕುಟುಂಬದ ಆದಾಯದಿಂದ 1963 ರಲ್ಲಿ ಖರೀದಿ ಮಾಡಿದ್ದರು ಎಂದರೆ ಗೊತ್ತಿಲ್ಲ. ಈಗಲೂ ಸಹ ಅವರು ಸಹೋದರರು ಜಂಟಿ ಸ್ವಾಧೀನದಲ್ಲಿ ಆ ಸ್ವತ್ತಿನಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಓ.ಎಸ್. ನಂ 348/94 ರಲ್ಲಿ ದಾವಾ ಐಟಂ ನಂ 3 ರ ಸ್ವತ್ತು ಸೇರಿಸಿದ್ದಾರೆ. ಚಿಕ್ಕದಾಸಪ್ಪನ ಮಕ್ಕಳು ಪುನಹ 1982

ರಲ್ಲಿ ಪಂಚಾಯಿತಿದಾರರ ಸಮಕ್ಷಮ ಪಂಚಾಯಿತಿ ಪಾಲುಪಟ್ಟಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಅವರ ನಡುವೆ ಸಮಪಾಲು ಆಗದೇ ಇದ್ದ ಕಾರಣ 1982 ರ ಮೇಲೆ ಹೇಳಿದ ಪಂಚಾಯಿತಿ ಪಾಲುಪಟ್ಟಿಯು ಸಹ ಅಮಾನತ್ತಿನಲ್ಲಿಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ಕಾರಣದಿಂದ ಚಿಕ್ಕದಾಸಪ್ಪನ ಎಲ್ಲಾ ಮಕ್ಕಳು ಇವತ್ತಿನವರೆವಿಗೂ ದಾವಾ ಸ್ವತ್ತುಗಳಲ್ಲಿ ಜಂಟಿ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ.

5ನೇ ಪ್ರತಿವಾದಿ ನನ್ನ ಹೆಂಡತಿ ಎಂದರೆ ನಿಜ. ಚಿಕ್ಕದಾಸಪ್ಪನ ಎಲ್ಲಾ ವಾರಸುದಾರರ ಅವಿದ್ಯಾವಂತರು ಎಂದರೆ ಸರಿಯಲ್ಲ. ನನ್ನ ಹೆಂಡತಿ 5ನೇ ಪ್ರತಿವಾದಿಯು ದಾವಾ ಐಟಂ ನಂ 2 ದಿ:13.04.1993 ರಲ್ಲಿ ಖರೀದಿ ಮಾಡಿದ ಬಳಿಕ ದಾವಾ ಐಟಂ ನಂ 1 ರ ಆಸ್ತಿಯು 2004 ರಲ್ಲಿ ನಾನು ಖರೀದಿ ಮಾಡಿದ್ದೇನೆ ಎಂದರೆ ನಿಜ. ದಾವಾ ಐಟಂ ನಂ 2 ರ ದಾಖಲಾತಿಗಳು ನಾನೇ ನೋಡಿ ಪರಿಶೀಲಿಸಿ ನನ್ನ ಹೆಂಡತಿಯ ಹೆಸರಿಗೆ ಕ್ರಯ ಮಾಡಿಸಿದ್ದೇನೆ ಎಂದರೆ ನಿಜ. ಆ ಸಮಯದಲ್ಲಿ 1ನೇ ಪ್ರವಾದಿಯ ಹೆಣ್ಣುಮಕ್ಕಳ ಮದುವೆ ಆಗಿರಲಿಲ್ಲ. ಅವರು ಇದ್ದ ಬಗ್ಗೆ ಗೊತ್ತಿತ್ತು. ಅವರು ಇರುವ ವಿಚಾರ ಗೊತ್ತಿದ್ದರೂ ಸಹ ನಾನು ಕಾನೂನು ಬಾಹಿರವಾಗಿ ಅವರಿಗೆ ಗೊತ್ತಿಲ್ಲದ ಹಾಗೇ ನನ್ನ ಹೆಂಡತಿಯ ಹೆಸರಿಗೆ ಕ್ರಯಪತ್ರ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿಯೂ ಸಹ ಚಿಕ್ಕದಾಸಪ್ಪನ ವಾರಸುದಾರರು ಎಲ್ಲರೂ ದಾವಾ ಐಟಂ ನಂ 2 ರಲ್ಲಿ ಜಂಟಿ ಸ್ವಾಧೀನ ಹೊಂದಿದ್ದರು ಎಂದರೆ ಸರಿಯಲ್ಲ. ಅವರೆಲ್ಲರಿಗೂ ಆ ಆಸ್ತಿಯಲ್ಲಿ ಹಕ್ಕು ಇರುವ ವಿಚಾರ ಗೊತ್ತಿದ್ದರು ಸಹ ನಾನು ಮೋಸದಿಂದ ಕ್ರಯಪತ್ರ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಮತ್ತು ಪ್ರತಿವಾದಿ 1 ರಿಂದ 4 ಇವರು ಜಂಟಿ ಸ್ವಾಧೀನದಲ್ಲಿ ಇರುವ ವಿಚಾರ ಗೊತ್ತಿದ್ದರೂ ಸಹ 2004 ರಲ್ಲಿ ದಾವಾ ಐಟಂ ನಂ 1 ರ ಆಸ್ತಿ ಕ್ರಯ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ 1 ರ ಆಸ್ತಿಗೆ ಸಂಬಂಧಪಟ್ಟಂತೆ ದಿ:04.05.1981 ರ ಕ್ರಯಪತ್ರ ಗೋವಿಂದಪ್ಪನ ಹೆಸರಿಗೆ ನಾನೇ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಿಕ್ಕದಾಸಪ್ಪನ ಮಗ ಈರಮರಿಯಪ್ಪನಿಗೆ ದಾವಾ ಐಟಂ ನಂ 1 ರ ಬಗ್ಗೆ ಕ್ರಯಪತ್ರ ಬರೆದುಕೊಡಲು ಹಕ್ಕು ಅಥವಾ ಅಧಿಕಾರ ಇಲ್ಲದೇ ಇದ್ದರೂ ಸಹ ನಾನೇ ಆ ದಾಖಲೆಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಲಿಂಗಮ್ಮ ಎನ್ನುವ ಹೆಸರಿನ ಒಬ್ಬ ಮಹಿಳೆಯನ್ನು ಸೃಷ್ಟಿ

ಮಾಡಿ ಓ.ಎಸ್. ನಂ 348/94 ದಾವೆಯನ್ನು ಹಾಕಿಸಿದ್ದೇ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಇದುವರೆವಿಗೂ ಚಿಕ್ಕದಾಸಪ್ಪನ ಎಲ್ಲಾ ವಾರಸುದಾರರು ಈಗಲೂ ಸಹ ಜಂಟಿಯಾಗಿ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ಅವರ ಭಾಗವನ್ನು ಲಪಟಾಯಿಸುವ ಉದ್ದೇಶದಿಂದ ನಾನು ನನ್ನ ಹೆಸರಿಗೆ ಮತ್ತು ನನ್ನ ಹೆಂಡತಿಯ ಹೆಸರಿಗೆ ಕ್ರಯಪತ್ರಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಚಿಕ್ಕದಾಸಪ್ಪನ ವಾರಸುದಾರರ ನಡುವೆ ಪಂಚಾಯಿತಿ ಪಾಲುಪಟ್ಟಿಗಳು ಅಮಾನತ್ತಿನಲ್ಲಿ ಇಟ್ಟ ಕಾರಣ ಇದುವರೆವಿಗೂ ಯಾವುದೇ ಭಾಗ ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಮತ್ತು ನನ್ನ ಹೆಂಡತಿಯ ಹೆಸರಿಗೆ ಕ್ರಯಪತ್ರಗಳು ಬರೆದುಕೊಡಲು 1ನೇ ಪ್ರತಿವಾದಿ ಮತ್ತು ಆತನ ತಂದೆಗೆ ಹಕ್ಕು ಅಥವಾ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯರ ಹಕ್ಕನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ, ಸುಳ್ಳು ದಾಖಲೆ ಸೃಷ್ಟಿ, ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್‌ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ,

ಹಿರಿಯ ಸಿ.ಜೆ. ಮತ್ತು ಜೆಎಂಎಫ್.ಸಿ ಸಿರಾ.